# ಶ್ರೇಷ್ಠ ಕೃಷಿ ಮಹಿಳೆ-2011
## ಜಿಲ್ಲೆ: ಹಾವೇರಿ



**ವಿಳಾಸ: ಶ್ರೀಮತಿ ರಾಜೇಶ್ವರಿ ವೀರಯ್ಯ ಹಿರೇಮಠ**
**ಗ್ರಾ : ಬಾದಮಗಟ್ಟಿ, ತಾ : ಹಾನಗಲ್**
**ಜಿ : ಹಾವೇರಿ**
**ಮೊ ನಂ : 9686976956**

## ಕೃಷಿಯಲ್ಲಿ ಮಾಡಿದ ಸಾಧನೆಗಳು

ಶ್ರೀಮತಿ ರಾಜೇಶ್ವರಿ ವೀರಯ್ಯ ಹಿರೇಮಠ ಇವರು ಮಹಿಳಾ ಸಬಲೀಕರಣದ ಉದ್ದೇಶದಿಂದ ಸರ್ಕಾರ ಒದಗಿಸಿರುವ ವಿವಿಧ ಸವಲತ್ತುಗಳನ್ನು ಸದ್ಬಳಕೆ ಮಾಡಿಕೊಂಡು ಸ್ವ-ಉದ್ಯೋಗಗಳಲ್ಲಿ ತೊಡಗಿ ತಮ್ಮ ಗ್ರಾಮವಾದ ಬದಾಮಗಟ್ಟಿಯನ್ನು ರಾಸಾಯನಿಕ ಗೊಬ್ಬರ ಮುಕ್ತ ಗ್ರಾಮವಾಗಿಸುವ ನಿಟ್ಟಿನಲ್ಲಿ ಆರಂಭಿಕ ಹೆಜ್ಜೆ ಇಟ್ಟಿದ್ದಾರೆ. ಈಗ ಎರೆಹುಳುಗಳೇ ಅವರ ತಮ್ಮ ಸಂಸಾರದ ನಿತ್ಯದ ಮೇಲು ಖರ್ಚಿನ ಗಳಿಕೆಯ ಮಾರ್ಗ. ಇವರ 4.5 ಎಕರೆ ಕೃಷಿ ಭೂಮಿಯಲ್ಲಿ ಅವಶ್ಯಕತೆ ಗನುಸಾರವಾಗಿ ಹನಿ ನೀರಾವರಿ ಹಾಗೂ ಬಸಿಗಾಲುವೆ ಮೂಲಕ ನೀರು ನಿರ್ವಹಣೆ ಮಾಡಿದ್ದಾರೆ. ಕೃಷಿ ಭೂಮಿಯನ್ನು ಸಮತಟ್ಟಾಗಿ ಮಾಡಿದ್ದಾರೆ. ಬದುವಿಗೆ ನೀಲಗಿರಿ, ಕೃಷಿ ಅರಣ್ಯ ಹಾಗೂ ಹಸಿರೆಲೆ ಗೊಬ್ಬರ ಗಿಡ ಬಳಸಲಾಗಿದೆ. ಮನೆಯ ಹಿತ್ತಲಿನಲ್ಲಿ ಕೈ ತೋಟ, ಹೂವಿನ ಗಿಡ ಹಾಗೂ ತೆಂಗಿನ ಗಿಡಗಳ ನಿರ್ವಹಣೆ ಮಾಡಿದ್ದಾರೆ. ಇವರು ಏಕಬೆಳೆಯಾಗಿ ಭತ್ತ, ಗೋವಿನಜೋಳ, ಹತ್ತಿ ಮೆಣಸಿನಕಾಯಿ ಹೂವಿನ ಗಿಡಗಳನ್ನು ಬೆಳೆಯುತ್ತಿದ್ದಾರೆ. ಇದರಿಂದ ವರ್ಷಕ್ಕೆ ಸುಮಾರು 3 ಲಕ್ಷಕ್ಕೂ ಹೆಚ್ಚು ಲಾಭವನ್ನು ಪಡೆಯುತ್ತಿದ್ದಾರೆ. ಅದೇ ರೀತಿ ಬಹು ಬೆಳೆಯಾಗಿ ಹುರಳಿ ಅಲಸಂದಿ ಉದ್ದು ಮತ್ತು ಹೆಸರು ಬೆಳೆಯುತ್ತಿದ್ದಾರೆ. ಮಿಶ್ರ ಬೆಳೆಯಾಗಿ ತೊಗರಿ ಮತ್ತು ಅಲಸಂದಿ ಬೆಳೆಯನ್ನು ಬೆಳೆಯುತ್ತಿದ್ದಾರೆ.

ಬೆಳೆಗೆ ಬೇಕಾದ ಸಾವಯವ ಗೊಬ್ಬರಗಳಾದ ಕಾಂಪೋಸ್ಟ್, ಎಲೆ ಗೊಬ್ಬರ, ಜೀವಾಮೃತ, ಜೀವಸಾರಗಳನ್ನು ತಾವೇ ತಯಾರಿಸಿಕೊಳ್ಳುತ್ತಾರೆ. ಸಾವಯವ ಕೃಷಿಯಿಂದ. ನೀರಿನ ಕೊರತೆ ನೀಗಿಸಿದ್ದಾರೆ. ಏಕೆಂದರೆ ಮಲ್ಚಿಂಗ್‌ನ್ನು ಮಾಡಿರುವುದರಿಂದ ನೀರಿನ ಬಳಕೆ ಬಹಳ ಕಡಿಮೆಯಾಗಿರುತ್ತದೆ.

*****